ಭಾಷಿ. ಆದರೆ ಅಹಮ್ಮಿಕೆ ಇಲ್ಲ. ಇವನದು ಲಾರಿಗಳ ಟ್ರಾನ್ಸ್‌ಪೋರ್ಟ್ ಬ್ಯುಜಿನೆಸ್ಸು. ಕೊಲ್ಲಾಪುರದಲ್ಲಿ ವಾಸ್ತವ್ಯ. ಹೆಂಡತಿ ಆಗಾಗ ಸುಳಕೋಡಗೆ ಬಂದು ಹೋಗುವುದನ್ನು ಮಾಡುತ್ತಿದ್ದಳು. ನಿರುಪದ್ರವಿ ಜೀವಿ. ಇವರಣ್ಣ ಅಣ್ಣಾಸಾಬ ಸರಿತಕ್ಕಳ ಗಂಡ. ರೂಪಾಳ ತಂದೆ. ಲಿಲಿಪುಟ್ ತರದ ಐದಡಿ ಎರಡಿಂಚಿನ ಈತ ಮನೆ ಮತ್ತು ಒಕ್ಕಲುತನ ಹೊಣೆ ಹೊತ್ತವ. ಬೆಳಿಗ್ಗೆ ಸಂಜೆ ಎಮ್ಮೆ ಹಾಲು ಹಿಂಡಿ ತರುವ ಖಾಯಂ ವೃತ್ತಿ. ಅಣ್ಣಾಸಾಬ ಹಿಂದೆ ಬಂದರೆ ಒದೆಯದ, ಮುಂದೆ ಬಂದರೆ ಹಾಯದ ಎಮ್ಮೆಯ ಮನಸ್ಸು.

ಮತ್ತೊಬ್ಬ ರೂಪಾಳ ಚಿಕ್ಕಪ್ಪ ಎಲ್ಲರಗಿಂತ ಸಣ್ಣವ. ಅತೀ ಮಾತುಗಾರ. ಲೈಫನ್ನು ಅದರ ಸ್ವಭಾವದೊಟ್ಟಿಗೆ ಬಿನ್‌ದಾಸ್ ಆಗಿ ಹರಿಯಬಿಟ್ಟ ಜಾಲಿಬಾಬು. ಶ್ರೀಶೈಲ ಇವನ ನಾಮಾಂಕಿತ. ಇವೆರೆಲ್ಲರಿಗೆ ಒಬ್ಬಳೇ ತಂಗಿ ಸುಭದ್ರ ಇದ್ದಳು. ಸಾಧಾರಣ ಎನಿಸುವ ಪ್ರಕೃತಿಯವಳು. ಸುಭದ್ರಳನ್ನು ಬೆಡಗಿನಹಳ್ಳಿಯಲ್ಲಿ ಮದುವೆ ಮಾಡಿಕೊಟ್ಟಿದ್ದರು. ಬಸೂನ ಪಕ್ಕದ ಮನೆಯಲ್ಲಿ. ಈ ಮನೆಗೇ ರೂಪಾ ರಜೆಯ ದಿನಗಳಲ್ಲೋ, ವಿಶೇಷ ಸಮಾರಂಭಗಳಲ್ಲೋ ಖಾತ್ರಿಯಾಗಿ ಠಿಕಾಣಿ ಹೂಡಿರುತ್ತಿದ್ದಳು. ಈ ಪಕ್ಕದ ಮನೆ 'ಮಾದಿ' ಪಾರಿವಾಳಕ್ಕೂ, ಬಸೂವೆಂಬ 'ನರ' ಪಾರಿವಾಳವೂ 'ಗುಟುರು ಗೂಂ' ಎಂದಿದ್ದೇ ಸಿದರಾಯನ ಗುಡಿಯ ಮಾಡುಗಳಲ್ಲಿ.

ಬೆಳಿಗ್ಗೆ ಪಾರಿವಾಳಗಳ ಹಿಂಡು ದೇವರಿಗೆ ಬಂದ ಭಕ್ತರು ಹಾಕುತ್ತಿದ್ದ ಕಾಳುಗಳನ್ನು ತಿನ್ನುತ್ತಿದ್ದವು. ಆಕೆ ಬಂದಾಗ ಅಲ್ಲಿ ಇವರಿಬ್ಬರೂ ಸಾಮಾನ್ಯವಾಗಿ ಪೌಳಿ ಕಟ್ಟೆಯ ಮೇಲೆ ಕೂತಿರುತ್ತಿದ್ದರು.

'ಎಯ್ ಮಾಮಾ... ಈ ಪಾರಿವಾಳ ಹಿಂಡಿನ್ಯಾಗ ನರ ಯಾವುದು? ಮಾದಿ ಯಾವುದ ಹೇಳ ನೋಡೋಣು!' ಅಂತ ಪೌಳಿ ಕಟ್ಟೆಯ ಮೇಲೆ ಕೂತು ಸಲುಗೆಯಿಂದ ಬಸೂನ ತೊಡೆಯ ಮೇಲೆ ಇಲ್ಲವೆ ಹೆಗಲ ಮೇಲೆ ಕೈ ಹಾಕಿ, ಮೈಗೆ ಮೈ ಹಚ್ಚಿಕೊಂಡು ಕೇಳುತ್ತಿದ್ದಳು. ಹೇಳಿ ಕೇಳಿ ಹಳ್ಳಿ. ಬಸೂ ಮುಜುಗರದಿಂದ ಆಕೆಗೆ ಅರಿವಿಗೆ ಬರದಂತೆ ಕೈ ಮೈ ಬಿಡಿಸಿಕೊಳ್ಳುತ್ತಿದ್ದ. ಗುಡಿಗೆ ಬರುವವರು ಯಾರಾದರೂ ನೋಡಿ ಏನಂದಾರು? ನೋಡಿಯಾರೆಂಬ ಚಿಕ್ಕ ಭಯ, ಆತಂಕ ಬಸೂನದು.

ಆಗ ಆಕೆಗೆ ಹದಿನೆಂಟು. ಈತನಿಗೆ ಇಪ್ಪತ್ತೈದು ಇದ್ದಿರಬಹುದು. ರೂಪಾ ಯಾವುದನ್ನೂ ಎಚ್ಚರ ಜಾಗರೂಕತೆ ಎಂದು ಭಾವಿಸುತ್ತಿರಲಿಲ್ಲ. ಬೇಝಿಜಕ್ ಹಾಗೂ ಬಿನ್‌ದಾಸ್ ಸ್ವಭಾವದವಳು. 'ನಾವು ಗೆಳೆಯರು... ಗೆಳೆಯರ ತರಹ, ಹತ್ತಿರವ್ಹೋ ದೂರವ್ಹೋ ಮೈಮನ ಬೆಸೆದುಕೊಂಡು ಇರುತ್ತಿವಪ್ಪ! ನಿಮದೇನು?' ಎಂದು ಧಾಡಸಿತನದಿಂದ ಯಾರಿಗೆ ಆದರೂ ಕೇಳಲು ಹಿಂಜರಿಯುವ ಪೈಕಿ ಅವಳಲ್ಲವೇ ಅಲ್ಲ!

ಬಸೂನ ಮನೆ ಎಡವಿ ಬಿದ್ದರೆ ಸಿದರಾಯನ ಗುಡಿಯಿದೆ. ಗುಡಿ ಅಷ್ಟು ಹತ್ತಿರ. ಆ ಮುಸ್ಸಂಜೆ ಎಂಬುದು ಹೊಟ್ಟೆ ತುಂಬಾ ಮಾಂಸ ತಿಂದ ನಾಯಿ ಮಲಗಿದಂಗೆ ಬಿದ್ದುಕೊಂಡಿತ್ತು. ಮನೆಯಲ್ಲಿ ಯಾರೂ ಇರಲಿಲ್ಲ. ಸಂಜೆ ಸಿದರಾಯನ ಗುಡಿಯ ನಗಾರಿ ಮೇಲೆ ಗುಣಿಕೆ ಸದ್ದಾಡುವ ಸಮಯ. ಬಸೂ ಮ್ಯಾಗಝಿನ್ ಓದುತ್ತ ಒಬ್ಬನೇ ಕೂತಿದ್ದ. ರೂಪಾ ಅವತರಿಸಿದಳು. ಮ್ಯಾಗಝಿನ್ ಮೆಲ್ಲಗೆ ಎತ್ತಿಟ್ಟಳು.

'ನಾ ಬಂದೇನಿ, ಓದು ಗೀದು ಯಾನೂ ಇಲ್ಲ ಈಗ...' ಕಿಲಕಿಲ ನಗು ನಡುವೆ ಮಾತು. 'ಅರೆ ನೀ ಯಾವಾಗ ಬಂದಿ... ಬಾ...' ಬಸೂ ಚಕಿತನಾಗಿ ಅಂದ. 'ನೀ ಈ ಮ್ಯಾಗಝಿನ್‌ದೊಳಗ ಮುಳುಗಿ ಹೋಗಿದ್ದಿಯಲ್ಲ... ಆಗನ ಬಂದ್ನಿ... ಬಂದ ಭಾಳ ಹೊತ್ತಾತು...' ಅವನನ್ನೇ ನೋಡುತ್ತ ಅಂದಳು. ಅವನ ಬಾಜೂ ಕುಳಿತಳು. 'ಮನ್ಯಾಗ ತಾತ್ಯಾ, ಕಾಕು, ಅಕ್ಕ ಎಲ್ಲ ಕಾಣತಿಲ್ಲ... ಮೊಳೋಕ್ಕ ಹೋಗ್ಯಾರು?' ಸುತ್ತಲೂ ಕಣ್ಣಾಡಿಸಿದ ರೂಪಾ ಕೇಳಿದಳು. ಅವಳ ದೇಹದಿಂದ ವಿಲಕ್ಷಣ ಪರಿಮಳ ಹೊರ ಹೊಮ್ಮುತ್ತಿತ್ತು. ಅದು ಬಸೂನ ಮೂಗಿಗೆ ಬಡಿಯಿತು. ಬೆವೆತ ಮೈಯ್ಯಿಂದ ಅಡರಾ ಬಡರಾ ತಿರುಗೋ ತಿಪ್ಪನಿಗೆ ಆ ವಾಸನೆ ವಿಲಕ್ಷಣ ಗುಂಗು ತರಿಸಿತು.

'ಶೇಂಗಾ ತಗೆಯೋದಿತ್ತಲ್ಲ... ಎಲ್ಲಾರೂ ಹೊಲಕ್ಕ ಹೋಗ್ಯಾರು... ಈಗ್ಯಾನೋ ಬಂದಾರು...'

'ಮಾಮಾ ಮಾಳಿಗಿ ಮ್ಯಾಲ ಬಾ... ನಿನ್ನ ಸಂಗಾಟ ಮಾತಾಡೋದೇತಿ...' ಕೈಹಿಡಿದು ಎಬ್ಬಿಸಲು ತೊಡಗಿದಳು.

'ಇಲ್ಲೇ ಯಾನ ಹೇಳಲ್ಲ! ಮನ್ಯಾಗಿನ ಮಂದಿ ಬರೋ ಹೊತ್ತು...' ಆಕೆ ಮೊಗದಲ್ಲೇ ಕಣ್ಣು ನೆಟ್ಟು ಕೇಳಿದ.

'ನೀ ಭಾಳ ಅಂಜತಿ ಬಿಡು... ಪುಕ್ಕಲು! ಬಾ ಯಾಡ ಮಿನೀಟು...' ಕೈಹಿಡಿದು ಕರೆದೊಯ್ಯ ತೊಡಗಿದಳು.